1976ರಿಂದ 1995ರ ಅವಧಿ ವಿಂಡೀಸ್ ಕ್ರಿಕೆಟ್ ಪಾಲಿಗೆ 'ಬಂಗಾರದ ಶಕೆ'. ಆ ಅವಧಿಯಲ್ಲಿ 137 ಟೆಸ್ಟ್ ಪಂದ್ಯಗಳ ಪೈಕಿ ವಿಂಡೀಸ್ 71ರಲ್ಲಿ ಗೆದ್ದಿತ್ತು. ಸೋತಿದ್ದು ಬರೀ 18ರಲ್ಲಿ. 3.89 ಪಂದ್ಯಗಳನ್ನು ಗೆದ್ದರೆ, 1ರಲ್ಲಿ ಸೋಲು ಎನ್ನುವ ಅದ್ಭುತ ಅನುಪಾತ. 1980ರಿಂದ 1995ರ ಅವಧಿಯನ್ನು ಗಮನಿಸಿದರೆ, ಆಡಿದ 31ರಲ್ಲಿ 21 ಟೆಸ್ಟ್‌ಗಳಲ್ಲಿ ವಿಂಡೀಸ್ ಗೆಲುವು ದಾಖಲಿಸಿತ್ತು. ಸೋತಿದ್ದು ಬರೀ ಒಂದರಲ್ಲಿ; ಅದೂ ಜೆಫ್ ಹೊವರ್ತ್ ನಾಯಕತ್ವದ ನ್ಯೂಜಿಲೆಂಡ್ ತಂಡದ ವಿರುದ್ಧ. ಆಗ ವೆಸ್ಟ್ ಇಂಡೀಸ್ ವೇಗದ ಬೌಲರ್‌ಗಳ ತೀವ್ರತೆ ಹೇಗಿತ್ತೆಂದರೆ, ಒಂದು ವಿಕೆಟ್ ಪಡೆಯಲು ಸರಾಸರಿ 26ಕ್ಕಿಂತ ಹೆಚ್ಚು ರನ್ ನೀಡುತ್ತಿರಲಿಲ್ಲ. ಮಾರ್ಷಲ್, ಗಾರ್ನರ್ ಇಬ್ಬರಂತೂ ಸರಾಸರಿ 21 ರನ್‌ಗೆ ಒಂದರಂತೆ ವಿಕೆಟ್ ಉರುಳಿಸುತ್ತಿದ್ದರು.

## ಏಕದಿನದ ಸಂಭ್ರಮ

ಟೆಸ್ಟ್ ಗತವೈಭವ ಮುಂದುವರಿದೀತೆ ಎಂಬ ಪ್ರಶ್ನೆ ಮೂಡಿಸಿದ ಏಕದಿನ ಕ್ರಿಕೆಟ್ ಪಂದ್ಯಗಳ ಭರಾಟೆ ಶುರುವಾಯಿತಲ್ಲ; ಅಲ್ಲೂ ವಿಂಡೀಸ್ ಛಾಪು ಮೂಡಿಸಿತು. 1975, 1979ರಲ್ಲಿ ವಿಶ್ವಕಪ್ ಗೆದ್ದಿದ್ದಲ್ಲದೆ ಸ್ಥಿರ ಪ್ರದರ್ಶನಕ್ಕೆ ಇನ್ನೊಂದು ಹೆಸರಾಗಿ ತಂಡ ಗುರುತಾಯಿತು. 1979ರಿಂದ 1995ರ ಅವಧಿಯಲ್ಲಿ ವಿಂಡೀಸ್ ಆಡಿದ 270 ಏಕದಿನದ ಪಂದ್ಯಗಳಲ್ಲಿ 173ರಲ್ಲಿ ಜಯ ಗಳಿಸಿದ್ದೇ ಇದಕ್ಕೆ ಸಾಕ್ಷಿ. ಗೆಲುವಿನ ಪ್ರತಿಶತ 64 ಎನ್ನುವುದೇ ಪುಷ್ಟಿ.


ವಿವಿಯನ್ ರಿಚರ್ಡ್ಸ್ ಜೊತೆ ಲಾರಾ

ಮಾರ್ಕ್ ಟೇಲರ್ ನಾಯಕತ್ವದ ಆಸ್ಟ್ರೇಲಿಯಾ ತಂಡ 1995ರಲ್ಲಿ ಮಣಿಸಿದ ನಂತರ ವಿಂಡೀಸ್ ಕ್ರಿಕೆಟ್ ಪಾಲಿಗೆ ಕೆಟ್ಟ ದಿನಗಳು ಶುರುವಾದವು. ಬ್ರಯಾನ್ ಲಾರಾ, ವಾಲ್ಷ್ ಹಾಗೂ ಆಂಬ್ರೂಸ್ ತರಹದ ಆಟಗಾರರ ಹೊಳಪು ಅದರ ಗತವೈಭವವನ್ನು ಒಂದಿಷ್ಟು ಕಾಲ ನೆನಪಿಸಿತು.

1990ರ ದಶಕದಲ್ಲಿ ಏಕದಿನ ಕ್ರಿಕೆಟ್ ಪಂದ್ಯಗಳು ದೊಡ್ಡ ವಾಣಿಜ್ಯಿಕ ಆಯಾಮವನ್ನು ಕ್ರಿಕೆಟ್‌ಗೆ ಒದಗಿಸಿದವು. ಟೆಸ್ಟ್ ಕ್ರಿಕೆಟ್ ಕೌಶಲಕ್ಕಿಂತ ಬ್ಯಾಟ್ಸ್‌ಮನ್ ಸ್ನೇಹಿ ಏಕದಿನ ಪಂದ್ಯಗಳ ಮೆರುಗು ಸೃಷ್ಟಿಸಿದ ಆರ್ಥಿಕ ಅವಕಾಶದ ಪರಿಧಿ ನಿರೀಕ್ಷೆಗೂ ಮೀರಿ ಹಿಗ್ಗಿತು. 'ಗೋಲ್ಡ್ ರಷ್' ಎಂದು ಇಂಗ್ಲಿಷ್‌ನಲ್ಲಿ ಕರೆಯುವ ಇಂಥ ಅವಕಾಶವನ್ನು ಭಾರತ ಚೆನ್ನಾಗಿ ಉಪಯೋಗಿಸಿಕೊಂಡಿತು. 1996ರಲ್ಲಿ ಅಂತರರಾಷ್ಟ್ರೀಯ ಕ್ರಿಕೆಟ್ ಮಂಡಳಿಗೆ (ಐಸಿಸಿ) ಕೋಲ್ಕತ್ತದ ವ್ಯಾಪಾರಿ ಜಗಮೋಹನ್ ದಾಲ್ಮಿಯಾ ಅಧ್ಯಕ್ಷರಾಗಿ ಆಯ್ಕೆಯಾದದ್ದು ಈ ಪ್ರಕ್ರಿಯೆಗೆ ಇಂಧನವಾಗಿ ಒದಗಿಬಂತು. ಏಷ್ಯಾ ಖಂಡದಲ್ಲಿ ವಿಶ್ವಕಪ್ ಆಯೋಜಿಸುವ ಕನಸು ನನಸಾಗಿದ್ದೂ ದಾಲ್ಮಿಯಾ ಅಧಿಕಾರದಿಂದಲೇ. ಅದು ತಂದುಕೊಟ್ಟ ಹಣದ ಪ್ರಮಾಣವೂ ಊಹಾತೀತವಾಗಿತ್ತು.

ಒಂದು ಕಡೆ ಭಾರತದಲ್ಲಿ ಕ್ರಿಕೆಟ್ ವೃತ್ತಿಪರ ಆಟವಾಗಿ ಬೆಳೆಯುತ್ತಿದ್ದರೆ, ಇನ್ನೊಂದು ಕಡೆ ವೆಸ್ಟ್ ಇಂಡೀಸ್ ಕ್ರಿಕೆಟ್ ಮಂಡಳಿ ದಿಕ್ಕೆಟ್ಟಿತು. ಕೆರೀಬಿಯನ್ ದ್ವೀಪದಲ್ಲಿ ಭಾವನಾತ್ಮಕವಾಗಿದ್ದ ಕ್ರಿಕೆಟ್‌ಗೆ ವೃತ್ತಿಪರತೆಯ ಚುಚ್ಚುಮದ್ದು ಸಿಗಲಿಲ್ಲ. ಹಣಕಾಸಿನ ದೃಷ್ಟಿಯಲ್ಲೂ ಆಟಗಾರರು ಬಡವರಾದರು. ಭಾರತೀಯ ಪ್ರತಿಭೆಗಳು ಹೊಳೆಯುವುದನ್ನು ನೋಡಿ, ತಮಗೆ ಅಂಥ ವೈಭೋಗ ಸಿಗಲಿಲ್ಲವೇ ಎಂದು ಮರುಗಲೂ ಕಾರಣಗಳಿದ್ದವು. 'ರೆಬೆಲ್ ವರ್ಲ್ಡ್ ಸೀರೀಸ್' (ಡಬ್ಲ್ಯುಎಸ್ ಸಿ) ಶುರುವಾದದ್ದು ಪರಿಸ್ಥಿತಿಯ ಪ್ರತಿಭಟನಾರ್ಥವಾಗಿ. ಹೋಲ್ಡಿಂಗ್ ತರಹದ ಆಟಗಾರರೂ ಅದರಲ್ಲಿ ಆಡಿದ್ದರು.

## ಬದಲಾದ ಲೆಕ್ಕಾಚಾರ

ಹೊಸ ಸಹಸ್ರಮಾನದಲ್ಲಿ ಕ್ರಿಕೆಟ್ ಲೆಕ್ಕಾಚಾರಗಳು ಜಾಗತಿಕ ಮಾರುಕಟ್ಟೆಯಲ್ಲಿ ಸಂಪೂರ್ಣ ಬದಲಾದವು. ಅದು ದೊಡ್ಡ ವಹಿವಾಟಿನ ಆಟವಾಗಿ ಬೆಳೆಯತೊಡಗಿದಾಗಲೂ ವಿಂಡೀಸ್ ಕ್ರಿಕೆಟ್ ಮಂಡಳಿ ವಿಟಮಿನ್ ಸಿರಪ್ ಕುಡಿಯಲಿಲ್ಲ. ಬದಲಿಗೆ ಅಲ್ಲಿ ಆಟಗಾರರು ಹಾಗೂ ಕ್ರಿಕೆಟ್ ಮಂಡಳಿಯ ನಡುವೆ ಒಪ್ಪಂದದ ವಿಷಯದಲ್ಲಿ ತಿಕ್ಕಾಟ ಶುರುವಾಯಿತು. ದಾಲ್ಮಿಯಾ ತರಹದ ವಾಣಿಜ್ಯಿಕ ಜಾಣ ಅಲ್ಲಿ ಕಣ್ಣು ಬಿಡಲೇ ಇಲ್ಲ. ವಿದೇಶಿ ಪ್ರವಾಸಗಳೆಲ್ಲ ರದ್ದಾಗತೊಡಗಿದವು. ಅದಕ್ಷತೆ, ಭ್ರಷ್ಟಾಚಾರ ಕಂಡ ದೇಸಿ ಕ್ರಿಕೆಟ್ ಪ್ರತಿಭೆಗಳಿಗೂ ತಮ್ಮ ನೆಲದಲ್ಲಿ ಆಟಕ್ಕೆ ಭವಿಷ್ಯವಿದೆ ಎಂಬ ಭರವಸೆ ಮೂಡಲಿಲ್ಲ.

ಆಗ ವೆಸ್ಟ್ ಇಂಡೀಸ್ ಆಟಗಾರರಿಗೆ ಬೆಳ್ಳಿಗೆರೆಯಾಗಿ ಕಾಣತೊಡಗಿದ್ದು 'ಇಂಡಿಯನ್ ಪ್ರೀಮಿಯರ್ ಲೀಗ್' ಅರ್ಥಾತ್ 'ಐಪಿಎಲ್'. ಟೆಸ್ಟ್ ಕ್ರಿಕೆಟ್‌ನಲ್ಲಿ ಮೂರು ತ್ರಿಶತಕ ಗಳಿಸಿದ್ದ ಕ್ರಿಸ್ ಗೇಯ್ಲ್ ತರಹದ ಪ್ರತಿಭಾವಂತ ಐಪಿಎಲ್‌ನ ತಾರಾ ಆಟಗಾರನಾದರು. ಡ್ವೇನ್ ಬ್ರಾವೋ, ಡ್ವೇನ್ ಸ್ಮಿತ್, ಕೀರನ್ ಪೊಲಾರ್ಡ್, ಡರೆನ್ ಸ್ಯಾಮಿ ತಮ್ಮ ಮಿತಿಯೊಳಗೇ ಹೊಳೆದರು.

ಮೂರು ಸಚಿನ್ ತೆಂಡೂಲ್ಕರ್ ದೇಹಗಳಿಗೆ ಸಮನಾದ ಅಗಾಧ ಕಾಯದ ಆಟಗಾರ ಪೊಲಾರ್ಡ್. ತೆಂಡೂಲ್ಕರ್ ಆಡಿದ ಮುಂಬೈ ಇಂಡಿಯನ್ಸ್ ತಂಡದಲ್ಲೇ ಅವರೂ ಚುಟುಕು ಆಟ ಆಡಿದ್ದು ಕ್ರಿಕೆಟ್‌ನ ರೋಚಕ ಸಾಧ್ಯತೆಯೇ ಹೌದು. ಐಪಿಎಲ್ ಯಶಸ್ಸನ್ನು ಕಂಡು 'ಪಿಎಸ್‌ಎಲ್', 'ಸಿಪಿಎಲ್', 'ಬಿಪಿಎಲ್', 'ಬಿಬಿಎಲ್' ಎಂದೆಲ್ಲಾ ಶುರುವಾದವಲ್ಲ; ಅಲ್ಲಿಗೂ ಹೋಗಿ ಗೇಲ್, ಬ್ರಾವೋ ಆಡಿದರು. ಟೆಸ್ಟ್ ಹಾಗೂ ಏಕದಿನ ಕ್ರಿಕೆಟ್ ಪಂದ್ಯದಲ್ಲಿ ಎದುರಾಳಿಗಳಲ್ಲಿ ನಡುಕ ಹುಟ್ಟಿಸುತ್ತಿದ್ದ ತಂಡದ ಆಟಗಾರರು ಹೀಗೆ 'ಟ್ವೆಂಟಿ– 20' ಚುಟುಕು ಕ್ರಿಕೆಟ್‌ನ ಕೂಲಿಯಾಳುಗಳಂತೆ ಆಗಿಬಿಟ್ಟರು. ರಾಷ್ಟ್ರೀಯ ಕ್ರಿಕೆಟ್‌ಗಿಂತ ಕ್ಲಬ್ ಕ್ರಿಕೆಟ್ಟೇ ಎಷ್ಟೋ ಪ್ರಮುಖ ಆಟಗಾರರಿಗೆ ಮುಖ್ಯವಾಗಿದ್ದೇ ಚುಟುಕು ಕ್ರಿಕೆಟ್ ತಂದಿತ್ತ ದೊಡ್ಡ ಸಂಭಾವನೆಯಿಂದ.

## ಮೂಲತತ್ವಗಳ ಮರೆವು

ದೇಸಿ ಕ್ರಿಕೆಟ್‌ನಲ್ಲಿ ಅಗತ್ಯ ಬಂಡವಾಳ ಹೂಡದೇ ಇರುವುದು, 16 ರಾಜ್ಯ ತಂಡಗಳನ್ನು ಒಗ್ಗೂಡಿಸುವ ವ್ಯವಸ್ಥೆಯಲ್ಲಿನ ಬಿರುಕು, ಪ್ರಮುಖ ಆಟಗಾರರಿಂದ ಪದೇ ಪದೇ ಮಂಡಳಿಗೆ ನಿಂದನೆ – ಇವೆಲ್ಲವೂ ವಿಂಡೀಸ್ ಕ್ರಿಕೆಟ್‌ನ ಪತನದ ಹಾದಿಗೆ ಕನ್ನಡಿ ಹಿಡಿದವು.

ಭವ್ಯವಾದ ಪರಂಪರೆ ಇರುವ ದೇಶದ ತಂಡವು ಹೀಗೆ ಟೆಸ್ಟ್ ಕ್ರಿಕೆಟ್‌ನಲ್ಲಿ ತಡಕಾಡುತ್ತಿರುವುದಾದರೂ ಯಾಕೆ? ವಿಂಡೀಸ್‌ನ ಆಲ್ ರೌಂಡರ್ ಕಾರ್ಲ್ ಹೂಪರ್ ಎರಡು ವರ್ಷಗಳ ಹಿಂದೆಯೇ ಇದಕ್ಕೆ ಉತ್ತರ ಕೊಟ್ಟಿದ್ದರು: 'ಚುಟುಕು ಕ್ರಿಕೆಟ್ ಪ್ರೀತಿ ವಿಪರೀತವಾಗಿಬಿಟ್ಟರೆ ಆಟದ ಮೂಲತತ್ವಗಳು ಮರೆತುಹೋಗುತ್ತವೆ. ಈಗ ವಿಂಡೀಸ್ ಕ್ರಿಕೆಟ್‌ಗೆ ಅದೇ ಪರಿಸ್ಥಿತಿ ಬಂದೊದಗಿರುವುದು. ಕ್ರಿಕೆಟ್ ಮಂಡಳಿ ಕೂಡ ಪ್ರತಿಭಾವಂತ ಆಟಗಾರರ ಬೆನ್ನುತಟ್ಟುವ ಕೆಲಸ ಮಾಡಲಿಲ್ಲ'.

ಹೋದವರ್ಷ ಚಾಂಪಿಯನ್ಸ್ ಟ್ರೋಫಿಗಾಗಿ ಆಡುವ ಅರ್ಹತೆ ಗಳಿಸಲೂ ಆಗದಷ್ಟು ವಿಂಡೀಸ್ ಕುಸಿದುಹೋಯಿತು. ಜಿಂಬಾಬ್ವೆ, ಬಾಂಗ್ಲಾ ತರಹದ ಕ್ರಿಕೆಟ್ ಕೂಸುಗಳೆಂದು ಕರೆಸಿಕೊಳ್ಳುವ ತಂಡಗಳ ಮಟ್ಟಕ್ಕೆ ಇಳಿದದ್ದೂ ದುರಂತ.

ನಡು ನಡುವೆ ಚಾರ್ಲ್ಸ್, ಗಂಗಾ ತರಹದ ಕುಶಲಮತಿ ಆಟಗಾರರು ಕಾಣಿಸಿದರು. ಶಿವನಾರಾಯಣನ್ ಚಂದ್ರಪಾಲ್ ತೆಗೆದುಕೊಳ್ಳುತ್ತಿದ್ದ ವಿಚಿತ್ರ 'ಗಾರ್ಡ್' ಬೌಲರ್‌ಗಳನ್ನು ಪರೀಕ್ಷೆಗೆ ಒಡ್ಡಿತು. ನರೇನ್ ತರಹದ ಜಾಣ ಬೌಲರ್ ಹೊಳೆದರು. ಆದರೆ, ದ್ವೀಪ ರಾಷ್ಟ್ರದ ಪ್ರತಿಭೆಗಳಿಗೆ ಚುಟುಕು ಕ್ರಿಕೆಟ್ ಅನಿವಾರ್ಯ ನಿಲ್ದಾಣವಾಗಿ ಮಾರ್ಪಟ್ಟಿದ್ದಕ್ಕೆ ಏನನ್ನುವುದು ಎಂದು ವಾಲ್ಷ್ ಕೂಡ ಪ್ರಶ್ನಿಸಿದ್ದರು.

1995ರಲ್ಲಿ ಆಸ್ಟ್ರೇಲಿಯಾ ಎದುರು ದಿಕ್ಕೆಟ್ಟು ಸೋತ ನಂತರ ಇದುವರೆಗೆ ವೆಸ್ಟ್ ಇಂಡೀಸ್ 230ಕ್ಕೂ ಹೆಚ್ಚು ಟೆಸ್ಟ್‌ಗಳನ್ನಾಡಿದೆ. ಗೆದ್ದಿರುವುದು ಬರೀ 38ರಲ್ಲಿ. ಮತ್ತೊಮ್ಮೆ ಈಗ 1976ರಿಂದ 1995ರ ಗೆಲುವಿನ ಪ್ರತಿಶತದ ಕಡೆಗೆ ನೋಡಿ. ವಿಂಡೀಸ್ ಮಕಾಡೆಯಾಗಿರುವುದು ತಲೆಮೇಲೆ ಹೊಡೆದಂತೆ ಕಾಣುತ್ತದೆ. ●